Statement by the Deputy Speaker

re : taking up the matter of Calling Attention Notices every day.

Mr. DEPUTY SPEAKER.—It was stated that Call Attention Notices have been given and that they do not come up. Under Rule 63, one call attention per day can be taken. Sometime back I suggested to the House that if no supplementaries are put or no clarifications are sought, we would like to have more than one at least two or three a day. The contention that they do not come up or taken up is not true. Hon. members should not impute something which is not correct.

Alleged Police Excess on Students in Tiptur

ಶ್ರೀ ಸಿ. ಬೈರೇಗೌಡ (ವೇಮಗಲ್).—ನಾನು ನಿನ್ನೆಯದಿವಸ ರೂಲ್ 50ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೇನೆ, ಅದು ಬಹಳ ಪ್ರಾಮುಖ್ಯವಾದಂಥ ವಿಷಯ ಇವತ್ತಿನದಿನ ನಮ್ಮ ರಾಜ್ಯದಲ್ಲಿ ಅನೇಕ ಘಟನೆಗಳು ನಡೆದಿವೆ. ಈ ಘಟನೆಗಳು ಮೊದಲು ಹಾಸನದಲ್ಲಿ ಪ್ರಾರಂಭವಾಗಿ, ಮೊನ್ನೆಯದಿವಸ ಅನೇಕರ್‌ನಲ್ಲಿ ನಡೆದಿದೆ, ಅಲ್ಲಿಂದ ಈಗ ನಮ್ಮ ಜಿಲ್ಲೆಗೆ ಬಂದಿದೆ. ವಿಷಯ ಏನೆಂದರೆ, ನಂಗ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಸಾಧು ಸಂಶಯಾತ್ಮಕ ರೀತಿಯಲ್ಲಿ ಸತ್ತಿದ್ದಾನೆ. ಅವನ ಹೆಣ, ಪೋಲೀಸ್ ಸ್ಟೇಷನ್‌ನ ಪಕ್ಕದಲ್ಲಿರತಕ್ಕ ಬಾವಿಯಲ್ಲಿ ತೇಡುತ್ತಿದ್ದುದು ಕಂಡುಬಂದಿದೆ. ಅಲ್ಲಿನ ಜನರ ಅಭಿಪ್ರಾಯ ಏನೆಂದರೆ, ಈ ಸಾಧುವಿನ ಸಾವಿಗೆ ಪೋಲೀಸರೇ ಕಾರಣ ಎಂದು. ಈ ಹೆಣವನ್ನು ಬಾವಿಯಿಂದ ತೆಗೆಯಬೇಕಾದರೆ, ಸುಮಾರು ಎರಡು ಸಾವಿರ ಜನ ವಿರೋಧ ಮಾಡಿದ್ದಾರೆ. ಇದನ್ನು ತಾವು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಬೇಕು. ಅಲ್ಲಿ ಜನರ ಅಭಿಪ್ರಾಯ ಏನೆಂದರೆ, ಪೋಲೀಸರು ಈತನನ್ನ ಹೊಡೆದು ಬಾವಿಯಲ್ಲಿ ಹಾಕಿದ್ದಾರೆ.

Mr. DEPUTY SPEAKER.—This can be converted as a Call Attention Notice under Rule 632, and it will serve the purpose. I am happy that the hon. member of the C.P.M. party has felt some sympathy for the Sadhu though idealogically it is very rare.

ಶ್ರೀ ಸಿ. ಬೈರೇಗೌಡ.—ಬರೀ ಸಾಧುವಿನ ಪ್ರಶ್ನೆ ಯಲ್ಲ, ಅಲ್ಲಿರತಕ್ಕ ಸಾಧು ಒಬ್ಬ ಮನುಷ್ಯ ಅವನು ಸತ್ತಿದ್ದಾನೆ.

Mr. DEPUTY SPEAKER.—I know the anxiety of the hon. member and I know the magnitude of it. But it will not come under Rule 50 ; we will get a reply from the Government under Rule 63.

ಶ್ರೀ ಸಿ. ಬೈರೇಗೌಡ.—ಇದರಲ್ಲಿ ಇನ್ನೊಂದು ಸಮಸ್ಯೆ ಏನೆಂದರೆ, ನಾನು ನೋಟೀಸ್‌ನಲ್ಲಿ ಪೂರ್ತಿಯಾಗಿ ಎಲ್ಲಾ ವಿಷಯಗಳನ್ನು ಬರೆದಿಲ್ಲ. ಈತನ ಸಾವಿಗೆ ಕಾರಣ ಏನೆಂದರೆ, ನಂಗ್ಲಿಯ ಪಕ್ಕದಲ್ಲಿ ಒಂದೂ, ಒಂದೂವರೆ ಮೈಲಿ ದೂರದಲ್ಲಿ ಪೆಂಕಟಾಪುರ ಎನ್ನುವ ಗ್ರಾಮ ಇದೆ. ಅಲ್ಲಿ ಒಂದು ಗಪ್ತ ನಿಧಿ ಇತ್ತು, ಇದನ್ನು ಈ ಸಾಧು ಯಾರಿಗೋ ತೋರಿಸಿದ, ನುಳಿವ ಪೋಲೀಸರಿಗೆ ನಮಗೂ ಕೂಡ ಅದರ ಪಾಲು ಬರಬೇಕು, ಆದ್ದರಿಂದ ನಮಗೂ ಅದನ್ನು ತೋರಿಸು ಎಂದು ಅವನನ್ನು ಹಿಡಿದು 13-14 ದಿವಸ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಂಡಿದ್ದಾರೆ.

Mr. DEPUTY SPEAKER.—The hon member should not try to raise a discussion. The Notice is with me and it is very clear. I want to hely the hon. member. Let him not get confused by elaborating it.